# ನಟರಾಜ ಟಾಕೀಸ್‌ನಲ್ಲಿ ಹರಿಶ್ಚಂದ್ರ




**ಶರಣ್ ನಟನೆಯ 'ನಟರಾಜ ಸರ್ವಿಸ್' ತೆರೆ ಕಾಣಲು ಸಿದ್ಧತೆ ನಡೆಸುತ್ತಿರುವ ಬೆನ್ನಿಗೆ, ಅವರ ನಟನೆಯ ಹೊಸ ಚಿತ್ರ 'ಸತ್ಯ ಹರಿಶ್ಚಂದ್ರ' ಮುಹೂರ್ತ ನಡೆಸಿದೆ.**

'ಸತ್ಯ ಹರಿಶ್ಚಂದ್ರ' ಎಂದಕೂಡಲೇ ಕನ್ನಡ ಚಿತ್ರರಸಿಕರ ಕಣ್ಣೆದುರು ಬರುವುದು ಘನತೆಯೇ ಮೈತಾಳಿದಂತೆ ಕಾಣಿಸುವ ರಾಜಕುಮಾರ್ ಅವರ ಮುಖ. ಇನ್ನುಮುಂದೆ, ಹರಿಶ್ಚಂದ್ರ ಎಂದಕೂಡಲೇ ರಾಜಕುಮಾರ್ ಜೊತೆಗೆ ಶರಣ್ ಅವರನ್ನೂ ನೆನಪಿಸಿಕೊಳ್ಳಬೇಕು. ಕಳೆದ ವಾರ ಮುಹೂರ್ತ ನಡೆಸಿದ ಶರಣ್‌ರ ಹೊಸ ಚಿತ್ರದ ಹೆಸರು 'ಸತ್ಯ ಹರಿಶ್ಚಂದ್ರ'. ಇದು ಪೌರಾಣಿಕ ಕಥನವಲ್ಲ, ಈ ಕಾಲದ ರೊಮ್ಯಾಂಟಿಕ್ ಕಾಮಿಡಿ ಕಥಾವಸ್ತುವಿನ ಸಿನಿಮಾ.

ಶರಣ್ ಹೀರೊ ಎಂದಮೇಲೆ ಈ ಹರಿಶ್ಚಂದ್ರ ಸತ್ಯವಂತ ಎಂದು ನಂಬುವುದು ಕಷ್ಟ. ಶರಣ್‌ರ ಕಾಮಿಡಿ ಇಮೇಜ್ ಕೂಡ ಸತ್ಯವಂತರ ಪಾತ್ರಗಳಿಗೆ ಪೂರಕವಾಗಿಯೇನೂ ಇಲ್ಲ. ಇಷ್ಟು ಮಾತ್ರವಲ್ಲ, ಚಿತ್ರದ ನಿರ್ದೇಶನ ದಯಾಳ್ ಪದ್ಮನಾಭನ್ ಎನ್ನುವುದು ಕೂಡ ಈ ಕಾಲದ ಹರಿಶ್ಚಂದ್ರನ ಕಥೆಯನ್ನು ಹೇಳುವಂತಿದೆ. 'ಕಥೆಗಾರ ಮಂಜಣ್ಣ' ಎಂದು ಕರೆಸಿಕೊಳ್ಳಲು ಖುಷಿ ಪಡುವ ಕೆ. ಮಂಜು ನಿರ್ಮಾಪಕರಾಗಿರುವುದು ಕೂಡ ಚಿತ್ರದಲ್ಲಿ ಇರಬಹುದಾದ 'ರಸಿಕತೆ'ಯನ್ನು ಸೂಚಿಸುವಂತಿದೆ.



'ಬಾ ಬಾರೊ ರಸಿಕ', 'ಸರ್ಕಸ್' ರೀತಿಯ ಮಸಾಲಾ ಚಿತ್ರಗಳನ್ನು ನಿರ್ದೇಶಿಸಿದ್ದ ದಯಾಳ್ ಕಳೆದ ಮೂರ್ನಾಲ್ಕು ವರ್ಷಗಳಿಂದ 'ಹಗ್ಗದ ಕೊನೆ', 'ಆಕ್ಟರ್' ಚಿತ್ರಗಳ ಮೂಲಕ ಪ್ರಯೋಗಶೀಲ ಚಿತ್ರಗಳತ್ತ ಒಲವು ವ್ಯಕ್ತಪಡಿಸಿದ್ದರು. ಇದೀಗ 'ಸತ್ಯ ಹರಿಶ್ಚಂದ್ರ' ಮೂಲಕ ಅವರು ಮತ್ತೆ ಅಪ್ಪಟ ಕಮರ್ಷಿಯಲ್ ಚಿತ್ರದ ನಿರ್ದೇಶನಕ್ಕೆ ಮರಳಿದ್ದಾರೆ. ಶರಣ್ ಜೊತೆಗೆ ಚಿಕ್ಕಣ್ಣ ಅವರನ್ನು ಜೊತೆಯಾಗಿಸುವ ಮೂಲಕ (ಹರಿಶ್ಚಂದ್ರನಿಗೆ ನಕ್ಷತ್ರಿಕ ಜೊತೆಯಾದಂತೆ) ದಯಾಳ್ ಜಾಣ್ಮೆಯನ್ನು ಮೆರೆದಿದ್ದಾರೆ.

ಸೆಪ್ಟೆಂಬರ್ ಕೊನೆಯ ಭಾಗದಿಂದ ದಯಾಳ್‌ರ ಹೊಸ ಸಿನಿಮಾದ ಮೊದಲ ಹಂತದ ಚಿತ್ರೀಕರಣ ಆರಂಭವಾಗಲಿದೆ. ಜರ್ಮನಿ, ಆಸ್ಟ್ರಿಯಾ, ಸ್ವಿಟ್ಜರ್ಲೆಂಡ್‌ಗಳಲ್ಲೂ ಚಿತ್ರೀಕರಣ ನಡೆಸಲು ಚಿತ್ರತಂಡ ಉದ್ದೇಶಿಸಿದೆ. ಈ ಮೂಲಕ ಶರಣ್‌ರ ದುಬಾರಿ ಚಿತ್ರಗಳಲ್ಲಿ ಹರಿಶ್ಚಂದ್ರ ಒಂದಾಗಲಿದೆ. ಅರ್ಜುನ್ ಜನ್ಯ ಸಂಗೀತ ಹಾಗೂ ಫೈಜಲ್ ಅಲಿ ಛಾಯಾಗ್ರಹಣ ಈ ಚಿತ್ರಕ್ಕಿದೆ.

ಒಂದೆಡೆ 'ಸತ್ಯ ಹರಿಶ್ಚಂದ್ರ' ಚಿತ್ರದ ಶೂಟಿಂಗ್ ಸಿದ್ಧತೆಗಳು ನಡೆಯುತ್ತಿದ್ದರೆ, ಇನ್ನೊಂದೆಡೆ ಶರಣ್‌ರ 'ನಟರಾಜ ಸರ್ವಿಸ್' ಚಿತ್ರವನ್ನು ತೆರೆಕಾಣಿಸುವ ಪ್ರಯತ್ನಗಳು ಚುರುಕುಗೊಂಡಿವೆ. ಪವನ್ ಒಡೆಯರ್ ನಿರ್ದೇಶನದ 'ನಟರಾಜ ಸರ್ವಿಸ್' ತನ್ನ ಪೋಸ್ಟರ್‌ಗಳಿಂದ ಹಾಗೂ ಗೀತೆಗಳಿಂದ ಗಾಂಧಿನಗರದ ಗಮನಸೆಳೆದಿದೆ. ಈ ಸಿನಿಮಾದ ಮೂಲಕ ಪವನ್ ಅವರು, 'ಗೋವಿಂದಾಯ ನಮಃ' ಚಿತ್ರದ ನಂತರ ಮತ್ತೊಂದು ಪೂರ್ಣ ಪ್ರಮಾಣದ ಹಾಸ್ಯಚಿತ್ರವನ್ನು ರೂಪಿಸಿದ್ದಾರೆ.

ಕನ್ನಡ ಚಿತ್ರರಂಗದಲ್ಲೀಗ ಪ್ರಯೋಗಶೀಲ ಚಿತ್ರಗಳ ಕಾಲ. ದೆವ್ವದ ಕಥಾವಸ್ತುವಿನ ಚಿತ್ರಗಳು ಚಾಲ್ತಿಯಲ್ಲಿರುವ ಸಂದರ್ಭದಲ್ಲಿ, 'ನೀರ್ ದೋಸೆ'ಯಂಥ ವಿಭಿನ್ನ ಕಥಾವಸ್ತುವಿನ ಚಿತ್ರವೂ ಗೆಲುವು ಕಾಣುತ್ತಿದೆ. ಇಂಥ ಸಂದರ್ಭದಲ್ಲಿ ಶರಣ್ ಕಾಮಿಡಿ ಎಕ್ಸ್‌ಪ್ರೆಸ್ ಪ್ರೇಕ್ಷಕರಿಗೆ ಮುಖಾಮುಖಿ ಆಗುತ್ತಿದೆ. ಇತ್ತೀಚೆಗೆ ಹಾಸ್ಯಚಿತ್ರಗಳು ಅಪರೂಪವಾಗಿರುವ ಹಿನ್ನೆಲೆಯಲ್ಲಿ ಕೂಡ 'ನಟರಾಜ ಸರ್ವಿಸ್' ಫಲಿತಾಂಶದ ಬಗ್ಗೆ ಆಶಾಭಾವ ಹೊಂದಲು ಕಾರಣವಾಗಿದೆ.

■ ರಘು